ಶ್ರೀ ರಾಮಚಂದ್ರ ಮಿಷನ್®
# ರಾಷ್ಟ್ರೀಯ ವಾರ್ತಾ ಪತ್ರ

ಜನವರಿ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 1 ಸಂಚಿಕೆ 1

ಪ್ರಿಯ ಸಹೋದರ, ಸಹೋದರಿಯರೆ,

ನಮಸ್ಕಾರಗಳು. ನಾವು ಎಸ್.ಆರ್.ಸಿ.ಎಮ್‌ನ ಭಾರತೀಯ ವಾರ್ತಾ ಪತ್ರದ ಪ್ರಥಮ ಸಂಚಿಕೆಗೆ ನಿಮ್ಮೆಲ್ಲರನ್ನೂ ಸ್ವಾಗತಿಸುತ್ತಿದ್ದೇವೆ. ಈ ವಾರ್ತಾ ಪತ್ರವು ಗುರುಗಳ ಇತ್ತೀಚಿನ ಪ್ರವಾಸಗಳ, ಪ್ರಕಟಣೆಗಳ ಹಾಗೂ ದೇಶಾದ್ಯಂತ ಚಟುವಟಿಕೆಗಳ ಬಗ್ಗೆ ಮಾಹಿತಿ ಒದಗಿಸುತ್ತದೆ.

ಈ ವಾರ್ತಾ ಪತ್ರವನ್ನು ಎರಡು ತಿಂಗಳಿಗೊಮ್ಮೆ ಇಂಗ್ಲೀಷ್, ಹಿಂದಿ, ತೆಲುಗು, ತಮಿಳು, ಕನ್ನಡ, ಮಲಯಾಳಂ, ಬೆಂಗಾಲಿ, ಗುಜರಾತಿ ಮತ್ತು ಮರಾಠಿ ಭಾಷೆಗಳಲ್ಲಿ ಪ್ರಕಟಿಸಲು ಯೋಜಿಸಲಾಗಿದೆ. ಅಭ್ಯಾಸಿಗಳು ಈ ವಾರ್ತಾಪತ್ರವನ್ನು ತಮ್ಮ ಆಯ್ಕೆಯ ನಿರ್ದಿಷ್ಟ ಭಾಷೆಯಲ್ಲಿ ಪಡೆಯಲು ಚಂದಾದಾರರಾಗಬಹುದು. ಈ ವಾರ್ತಾಪತ್ರವನ್ನು ಪಡೆಯಲು ಅನುಮೋದಿಸುವ ಎಲ್ಲಾ ಅಭ್ಯಾಸಿಗಳಿಗೂ ಇ-ಮೇಲ್ ಮೂಲಕ ಕಳಿಸಲಾಗುತ್ತದೆ. ಈ ವಾರ್ತಾಪತ್ರವು ಮಿಷನ್ನಿನ ವೆಬ್ ಸೈಟ್‌ನಲ್ಲಿ ಲಭ್ಯವಿದೆ.
http://www.srcm.org/centers/as/in/newsletter/index.jsp

ವಾರ್ತಾಲೇಖನವನ್ನು ಭಾರತದ ಎಲ್ಲೆಡೆಯಿಂದಲೂ ಆಹ್ವಾನಿಸಲಾಗಿದೆ. ಹಾಗೂ ಇವುಗಳನ್ನು ನಿಮ್ಮ ವಲಯ ಸಂಚಾಲಕರ ಸಮ್ಮತಿ ಪಡೆದು 20ನೇ ಫೆಬ್ರವರಿ 2008ರ ಒಳಗೆ in.newsletter@srcm.org ಗೆ, ಮಾರ್ಚ್ ಸಂಚಿಕೆಯಲ್ಲಿ ಮುದ್ರಿತವಾಗುವುದಕ್ಕಾಗಿ ಕಳಿಸಲು ಕೋರಲಾಗಿದೆ. ಗುರುಗಳ ಆಶೀರ್ವಾದದೊಂದಿಗೆ ನಿಮ್ಮೆಲ್ಲರಿಗೂ ಅತ್ಯಂತ ಸಂತೋಷಭರಿತ ಹಾಗೂ ಅಭ್ಯುದಯಕಾರಿ ಹೊಸವರ್ಷವನ್ನು ಹಾರೈಸುವ

ಸಂಪಾದಕ ವರ್ಗ.

## ಪೂಜ್ಯ ಗುರುಗಳ ಯೂರೋಪಿನ ಪ್ರವಾಸ – ಡಿಸೆಂಬರ್ 5ರಿಂದ 29, 2007



ಡಿಸೆಂಬರ್ 5, 2007ರಂದು ಗುರುಗಳು ಮೂವತ್ತು ಅಭ್ಯಾಸಿಗಳೊಂದಿಗೆ ಚೆನ್ನೈನಿಂದ ಹೊರಟು ಬೆಲ್ಜಿಯಂ ದೇಶದ ಬ್ರಸ್ಸೆಲ್ಸ್‌ಗೆ ಪ್ರಯಾಣ ಮಾಡಿದರು. ಜಾಗ ತಲುಪಿದಾಗ ಗುರುಗಳು ಹೋಟೆಲ್‌ನ ಸ್ವಾಗತಕೊಠಡಿಯಲ್ಲಿ ಬೆಳಿಗ್ಗೆ 9.30ರಿಂದ ಮಧ್ಯಾಹ್ನ 12ರ ವರೆಗೆ ಕಾದು ನಮ್ಮೆಲ್ಲರಿಗೂ ಸಹಿಷ್ಣುತೆ ಮತ್ತು ತಾಳ್ಮೆ ಏನೆಂಬುದನ್ನು ತೋರಿದರು.

6 ರಂದು ಬೆಳಿಗ್ಗೆ ಗುರುಗಳು ಪ್ಯಾರಿಸ್‌ಗೆ ಪ್ರಯಾಣ ಬೆಳೆಸಿದರು; ಅಲ್ಲಿ ಅವರನ್ನು ಸ್ವಾಗತಿಸಲು ಸಾವಿರ ಅಭ್ಯಾಸಿಗಳು ಸೇರಿದ್ದರು. ಗುರುಗಳು ಸ್ಥಳೀಯ ಅಭ್ಯಾಸಿಯೋರ್ವರ ಮನೆಯಲ್ಲಿ ತಂಗಿದರು; ಇದು ಐಫೆಲ್ ಟವರ್ ಬಳಿಯಿದ್ದು, ಪೂಜ್ಯ ಬಾಬೂಜಿಯವರು ಪ್ಯಾರಿಸ್‌ಗೆ ಭೇಟಿ ನೀಡಿದಾಗಲೂ ಅಲ್ಲಿಯೇ ತಂಗಿದ್ದನ್ನು ನೆನಪಿಸುತ್ತದೆ. ಆ ನಂತರ ಅವರು ಡಿಸೆಂಬರ್ 15ರಂದು ರಸ್ತೆಯ ಮೂಲಕವಾಗಿ ನೇರವಾಗಿ ವ್ರಾದ್ಸ್‌ಗೆ ಪಯಣಿಸಿ, ಅಲ್ಲಿ ಹದಿನಾರು ದೇಶಗಳ ಒಂಭೈನೂರು ಅಭ್ಯಾಸಿಗಳೊಂದಿಗೆ ಹನ್ನೊಂದು ದಿನಗಳು ತಂಗಿದ್ದರು. ವ್ರಾದ್ಸ್‌ನಲ್ಲಿ ಗುರುಗಳ ಭೇಟಿಯುದ್ದಕ್ಕೂ ಕ್ರಿಸ್‌ಮಸ್ ಹಬ್ಬದ ವಾತಾವರಣವಿದ್ದಿತು. ಭೂಮಿಯು ಮಂಜಿನಿಂದ ಶ್ವೇತವರ್ಣವಾಗಿದ್ದಿತು. ಅನೇಕ ಅಭ್ಯಾಸಿಗಳು ಗುರುಗಳೊಂದಿಗೆ ’ ದಿ ಗೋಲ್ಡನ್ ಕಂಪಾಸ್’ ಚಲನಚಿತ್ರವನ್ನು ನೋಡಲು ಹತ್ತಿರದ ಚಿತ್ರಮಂದಿರಕ್ಕೆ ಹೋಗಿದ್ದರು. ಗುರುಗಳು ಬಾಬೂಜಿಯವರ ಜನ್ಮದಿನಕ್ಕಾಗಿ ಯು.ಎಸ್.ಎ ಯ ಕ್ಲೀವ್‌ಲ್ಯಾಂಡ್‌ಗೆ ತಾವು ಹೋಗುವುದಾಗಿ ಪ್ರಕಟಿಸಿದರು.

ವ್ರಾದ್ಸ್‌ನ ಅಭ್ಯಾಸಿಗಳಿಗೆ ಪ್ರೀತಿಭರಿತ ಬೀಳ್ಕೊಡುಗೆಯೊಂದಿಗೆ ಗುರುಗಳು ಜರ್ಮನಿಯ ಚಿಕ್ಕ ಪಟ್ಟಣ ಬ್ರೆಮೆನ್‌ಗೆ ಪ್ರಯಾಣ ಮಾಡಿದರು. ಸಂಜೆ ಬ್ರೆಮೆನ್ ಮತ್ತು ಇತರ ಸ್ಥಳೀಯ ಕೇಂದ್ರಗಳ ಅಭ್ಯಾಸಿಗಳು ಸಂತೋಷ ಪಡುವಂತೆ ಗುರುಗಳು ಅನೇಕ ವಿಷಯಗಳ ಬಗ್ಗೆ ಔಪಚಾರಿಕವಾಗಿ ಮಾತನಾಡಿದರು. ಹೃದಯಪೂರ್ವಕವಾಗಿ ಮಾತನಾಡುವಾಗ ಗುರುಗಳು ಹೀಗೆ ಹೇಳಿದರು



“ಜರ್ಮನ್ನರು ಸತ್ಯದ ಪ್ರೇಮಿಗಳು. ನನ್ನ ಗುರುಗಳು ನನಗೆ ಹೋದಲ್ಲೆಲ್ಲಾ ಏನನ್ನಾದರು ನೀಡಲು ಕಲಿಸಿದ್ದಾರೆ. ನಾನು ಸತ್ಯವನ್ನು ಮಾತನಾಡಿದಾಗ ಅದು ನಿಮ್ಮೊಂದಿಗೆ ಉಳಿಯುತ್ತದೆ. ಒಂದಾನೊಂದು ದಿನ ಅದರ ಬಗ್ಗೆ ನೀವು ಚಿಂತಿಸಬಹುದು. ಆದ್ದರಿಂದಲೆ ನಾವು ಎಲ್ಲ ಕಾಲದಲ್ಲೂ ಪರಸ್ಪರ ಸತ್ಯವನ್ನೇ ಆಡಬೇಕು... ಕೇವಲ ನಮ್ಮಗಳ ಮಧ್ಯೆ ಅಲ್ಲ, ನಾವು ಕಾಣುವ ಎಲ್ಲರೊಂದಿಗೂ ಸಹ”.

ಡಿಸೆಂಬರ್ 27ರ ಬೆಳಿಗ್ಗೆ ಗುರುಗಳು ಬ್ರಸ್ಸೆಲ್ಸ್‌ನಿಂದ ನಿರ್ಗಮಿಸಿ 29ರ ರಾತ್ರಿ ಚೆನ್ನೈಗೆ ಹಿಂತಿರುಗಿದರು. ಗುರುಗಳೊಂದಿಗೆ ಪಯಣಿಸಿದ ಅಭ್ಯಾಸಿಗಳಿಗೆ ಇದೊಂದು ಮನೋಜ್ಞವಾದ ಅನುಭವವಾಗಿತ್ತು. ಅದು ಅಭ್ಯಾಸಿಗಳಿಗಾಗಿ ಅವರಲ್ಲಿರುವ ಪರಿಪೂರ್ಣ ಪ್ರೇಮದಿಂದಾಗಿ ಅವರ ಹೃದಯಭರಿತ ಅಭಿವ್ಯಕ್ತಿಯಾಗಿತ್ತು; ಅವರಿಗೆ ತಮ್ಮ ಬಗ್ಗೆ ಯಾವುದೇ ಕಾಳಜಿ ಇರುತ್ತಿರಲಿಲ್ಲ. ಸಾರಾಂಶವೆಂದರೆ ಅವರು ನಮ್ಮ ಹೃದಯವನ್ನು ಬಳಸಲು, ಧೈರ್ಯದಿಂದ ಚಿಂತಿಸಲು, ಇತರರೊಂದಿಗೆ ಹೃದಯಪುರ್ವಕವಾಗಿ ಮಾತನಾಡಲು ಮತ್ತು ಸೂಕ್ತ ವಿಚಾರಗಳಿಗಾಗಿ ದೃಢನಿರ್ಧಾರ ಕೈಗೊಳ್ಳಲು ನಮ್ಮೆಲ್ಲರನ್ನೂ ಪ್ರೇರೇಪಿಸಿದರು.

ಸಂ. ಧನುಮೂರ್ತಿ, ತಿರುಪ್ಪೂರು.

## ಚೆನ್ನೈನ ಮಣಪಾಕ್ಕಂನಲ್ಲಿ ಹೊಸ ವರ್ಷ



ಚೆನ್ನೈನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭಾನುವಾರ 30ನೇ ದಿಸೆಂಬರ್ 2007 ರಂದು ಬೆಳಗಿನ ಜಾವ 2.15 ಗಂಟೆಗೆ ಬ್ರುಸ್ಸೆಲ್ಸ್‌ನಿಂದ ಗುರುಗಳು ಬಂದಿಳಿದರು. ಅಲ್ಲಿ ಅವರಿಗಾಗಿ 400ರಕ್ಕೂ ಹೆಚ್ಚು ಅಭ್ಯಾಸಿಗಳು ಕಾಯುತ್ತಿದ್ದರು. ಗುರುಗಳು ಬಹು ಚೈತನ್ಯಭರಿತರಾಗಿ ಕಾಣುತ್ತಿದ್ದರು ಹಾಗೂ ಅವರು ತಮ್ಮನ್ನು ಕಾಣಲು ಬಂದು ಸೇರಿದ್ದ ಅಭ್ಯಾಸಿಗಳ ಗುಂಪಿನೊಂದಿಗೆ ಅವರನ್ನು ವಿಚಾರಿಸುವುದರಲ್ಲಿ ಸಾಕಷ್ಟು ವೇಳೆ ವಿನಿಯೋಗಿಸಿದರು. ನಂತರ ಅವರು ಬಾಬೂಜಿ ಮೆಮೋರಿಯಲ್ ಆಶ್ರಮಕ್ಕೆ ಕಾರಿನಲ್ಲಿ ಪಯಣಿಸಿದರು. ಅಲ್ಲಿ ಹೊಸವರುಷದಲ್ಲಿ ಅವರೊಂದಿಗಿರಲು ಬಹು ಸಂಖ್ಯೆಯಲ್ಲಿ ಅಭ್ಯಾಸಿಗಳು ಬಂದು ಸೇರಿದ್ದರು. ಅವರು ತಮಗೆ ನೀಡಲ್ಪಟ್ಟ ಪ್ರೀತಿಪೂರ್ವಕ ಸ್ವಾಗತವನ್ನು ಆದರಿಸುತ್ತ ಸ್ವಲ್ಪ ವೇಳೆ ಕಳೆದರು.

ಗುರುಗಳು ದೀರ್ಘ ಪ್ರಯಾಣದಿಂದ ರಾತ್ರಿ ಬಹು ತಡವಾಗಿ ಬಂದಿಳಿದಿದ್ದರೂ ಸಹ ಬೆಳಿಗ್ಗೆ ಬಹಳ ಬೇಗನೆ ಸಿದ್ಧರಾಗಿ, ಸಭಾಂಗಣದಲ್ಲಿ ಸೇರಿದ್ದ ಮೂರು ಸಾವಿರಕ್ಕೂ ಮೀರಿದ್ದ ಅಭ್ಯಾಸಿಗಳಿಗೆ ಹರ್ಷದಾಯಕವಾದ ಸತ್ಸಂಗ ನಡೆಸಿಕೊಟ್ಟರು. ಗುರುಗಳು ಆ ದಿನವಿಡೀ ಹಾಗೂ 31ರ ಬೆಳಿಗ್ಗೆ ಪ್ರಶಿಕ್ಷಕರನ್ನು ತಯಾರು ಮಾಡುವಲ್ಲಿ ಮತ್ತು ವಿವಿಧ ಆಡಳಿತಾತ್ಮಕ ಕೆಲಸಗಳಲ್ಲಿ ಬಿಡುವಿಲ್ಲದೇ ಕ್ರಿಯಾಶೀಲರಾಗಿದ್ದರು. 31ನೇ ಸಾಯಂಕಾಲ ಅವರು ತಮ್ಮ ಗೋಲ್ಫ್ ಬಂಡಿಯಲ್ಲಿ (ಕುಳಿತು) ಆಶ್ರಮದ ಸುತ್ತ ಓಡಾಡಿದರು.

ಗುರುಗಳು ಜನವರಿ ಮೊದಲನೇ ಬೆಳಿಗ್ಗೆ 5000ಕ್ಕೂ ಹೆಚ್ಚಿಗೆ ಸೇರಿದ್ದ ಅಭ್ಯಾಸಿಗಳಿಗೆ ಸತ್ಸಂಗ ನಡೆಸಿಕೊಟ್ಟರು. ಸಾಯಂಕಾಲ ಅವರ ಕುಟೀರದ ಹೊರಗಡೆ ಇರುವ ಬಾಬೂಜಿ ಮಹಾರಾಜರ ವಿಗ್ರಹದ ಬಳಿ ಸ್ವಲ್ಪ ಹೊತ್ತು "ಮೌನ-ಕಾಲ"ವನ್ನು ಕಳೆದರು. ಒಟ್ಟಿನಲ್ಲಿ, ಪೂಜ್ಯ ಗುರುಗಳೊಂದಿಗೆ ಹೊಸ ವರುಷ 2008ರ ಜನ್ಮದಿನಕ್ಕೆ ಬಂದಿದ್ದ ಅಭ್ಯಾಸಿಗಳು ಅವರ ಪ್ರೇಮ ಹಾಗೂ ಮಣಪಾಕ್ಕಂ ಆಶ್ರಮದಲ್ಲಿ ಅವತರಿಸಿದ್ದ ಆಧ್ಯಾತ್ಮಿಕ ವ್ಯಾಪಕತೆಯಲ್ಲಿ ಮೀಯುವ ಒಂದು ವಿಶೇಷತೆಯನ್ನು ಪಡೆದರು.

ಸಹಜ ಸಂದೇಶದ ವರದಿ ಆಧಾರಿತ

**ಪೂಜ್ಯಗುರುಗಳ ನವ ವರ್ಷದ ಸಂದೇಶ**

"ನೀವೆಲ್ಲರೂ ಆಧ್ಯಾತ್ಮಿಕವಾಗಿ ಅಪರಿಮಿತವಾಗಿ, ಶೀಘ್ರ ಗತಿಯಿಂದ ಉನ್ನತಿ ಹೊಂದುವಂತಾಗಲಿ".

## 'ಅವರು, ಹುಕ್ಕ ಮತ್ತು ನಾನು' ಪುಸ್ತಕದ ದೇಣಿಗೆ

ಈ ವಿಶೇಷ ಪ್ರಕಟಣೆಗಾಗಿ ನಮಗೆ ನಿರಂತರ ಬೇಡಿಕೆ ಬರುತ್ತಿರುವ ಕಾರಣದಿಂದಾಗಿ, ಪೂಜ್ಯ ಗುರುಗಳು ದೇಣಿಗೆಯನ್ನು ಇನ್ನೂ ತೆರೆದಿಟ್ಟಿರಲು ಅನುಮತಿ ನೀಡಿದ್ದಾರೆ. ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ಅಭ್ಯಾಸಿಗಳು ಅಭ್ಯಾಸಿಗಳು ತಮ್ಮ ಕ್ರೆಡಿಟ್ ಕಾರ್ಡ್ ಸಹಾಯದಿಂದ ಚಂದಾದಾರರಾಗಬಹುದು.

https://www.srcm.org/onlinebookstore/selectCountryForSubscriptions.jsp

ಈ ವಿಶೇಷ ಪ್ರಕಟಣೆಯನ್ನು ತಮಿಳು ಮತ್ತು ಹಿಂದಿ ಮಾತನಾಡುವ ಅಭ್ಯಾಸಿಗಳ ಲಾಭಕ್ಕಾಗಿ ಪುಸ್ತಕ ರೂಪದಲ್ಲಿ ತಮಿಳು ಮತ್ತು ಹಿಂದಿ ಭಾಷೆಗಳಲ್ಲಿ ಕೂಡ ಒದಗಿಸಲು ತೀರ್ಮಾನಿಸಲಾಗಿದೆ. 29-02-2008ರ ಒಳಗೆ ತಮ್ಮ ಪ್ರತಿಯನ್ನು ಕಾದಿರಿಸುವವರಿಗೆ ಬೆಲೆ 200/– ರೂ ಗಳು. 01-03-2008ರಂದು ಮತ್ತು ನಂತರ ಬೆಲೆ 300/– ರೂ ಗಳು. ಪ್ರಕಟಣೆಯನ್ನು ಸರಿಯಾಗಿ ನಿರ್ವಹಿಸಲು ಅನುಕೂಲವಾಗುವಂತೆ ಆದಷ್ಟು ಬೇಗ ತಮ್ಮ ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಲು ಅಭ್ಯಾಸಿಗಳಲ್ಲಿ ವಿನಂತಿಸಲಾಗಿದೆ. ಅಭ್ಯಾಸಿಗಳು ತಮ್ಮ ತಮ್ಮ ಸ್ಥಳದ ಆಯಾ ಪ್ರಕಟಣಾ ಸಂಚಾಲಕರು/ ಕೇಂದ್ರ ಸಂಚಾಲಕರನ್ನೂ ಸಹ ಸಂಪರ್ಕಿಸಬಹುದಾಗಿದೆ.

## ಸೇವೆ

"ಸೇವೆಯು ಪ್ರೀತಿಸುವುದಕ್ಕಿಂತ ಸುಲಭವಾದುದು, ಪ್ರೀತಿಸುವುದು ಬಹು ಕಷ್ಟಕರ. ಸೇವೆ ಬಹು ಸುಲಭ. ಹೃದಯ ಪೂರ್ವಕವಾಗಿ ಯಾರಿಗಾದರೂ ಸೇವೆ ಮಾಡಿ, ಅವರ ಪ್ರೇಮ ಮತ್ತು ಉಪಕಾರ ಭಾವ ನಿಮಗೆ ತದೆ ತಾನಾಗಿ ದೊರಕುವುದು; ಆಗ ಅವರು ನಿಮಗೆ ನೀಡಬೇಕಾದುದನ್ನು ನೀಡಲೇಬೇಕಾಗುತ್ತದೆ."

'ಹೃದಯದಿಂದ ಹೃದಯಕ್ಕೆ ಸಂಪುಟ 2' (ಆಂಗ್ಲ) ' ಪ್ರಶ್ನೋತ್ತರಗಳು–1' ಅಧ್ಯಾಯ, ಪುಟ 162, ಚಾರೀಜಿ

## ಪೂಜ್ಯ ಬಾಬೂಜಿಯವರ 109ನೇ ಜನ್ಮ ದಿನೋತ್ಸವ (2008)

ಪೂಜ್ಯ ಗುರುಗಳು, ಪೂಜ್ಯ ಬಾಬೂಜಿಯವರ 109ನೇ ಜನ್ಮ ದಿನದ ಶುಭ ಸಂದರ್ಭದಲ್ಲಿ ಒಂದು ಅಂತರರಾಷ್ಟ್ರೀಯ ಸಮ್ಮೇಳನವನ್ನು ಕ್ಲೀವ್‌ಲ್ಯಾಂಡ್, ಒಹಯೋ, ಯು.ಎಸ್.ಎ ನಲ್ಲಿ ತಮ್ಮ ಸಮ್ಮುಖದಲ್ಲಿ ನಡೆಸಲು ತೀರ್ಮಾನಿಸಿರುವುದನ್ನು ತಿಳಿಸಲು ನಮಗೆ ಸಂತೋಷವಾಗುತ್ತದೆ. ಈ ಸಮಾರಂಭದ ಕ್ಷೇತ್ರವು ಕ್ಲೀವ್‌ಲ್ಯಾಂಡ್‌ನ ಜಾತ್ರಾ ಮೈದಾನವಾಗಿದ್ದು, ನೂರು ಎಕರೆಗಳ ರಮಣೀಯ ಸ್ಥಳವಾಗಿದೆ. ಹತ್ತು ಸಾವಿರಕ್ಕೂ ಮೀರಿ ಅಭ್ಯಾಸಿಗಳಿಗೆ ಸ್ಥಳಾವಕಾಶವಿದೆ.

ಏಪ್ರಿಲ್ 28ರಿಂದ ಮೇ 1, 2008ರವರಿಗೆ ನಡೆಯುವ ಈ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಜಗತ್ತಿನಾದ್ಯಂತ ಅಭ್ಯಾಸಿಗಳಿಗೆ ಪೂಜ್ಯ ಗುರುಗಳು ಆಹ್ವಾನವನ್ನು ನೀಡಿರುತ್ತಾರೆ. ಜನವರಿ 2008ರ ಮೊದಲ ವಾರದಲ್ಲಿ ಜಗತ್ತಿನಾದ್ಯಂತ ಎಲ್ಲ ಕೇಂದ್ರಗಳಿಗೂ ಸಮ್ಮೇಳನದ ಎಲ್ಲ ವಿವರಗಳನ್ನೂ ಇ–ಮೇಲ್ ಮೂಲಕ ತಿಳಿಸಲಾಗುವುದು.

## ಬಾಬೂಜಿ ಮೆಮೋರಿಯಲ್ ಆಶ್ರಮದಲ್ಲಿ ಯುವಜನ ತರಬೇತಿ ಕಾರ್ಯಕ್ರಮ – ೯ನೇ ತಂಡ

ಯುವಜನ ತರಬೇತಿ ಕಾರ್ಯಕ್ರಮದ ಒಂಭತ್ತನೆಯ ತಂಡದ ಪ್ರಾರಂಭವನ್ನು ತಿಳಿಯಪಡಿಸಲು ನಾವು ಸಂತೋಷಿಸುತ್ತೇವೆ. ಇದು ಏಪ್ರಿಲ್ 1ರಿಂದ ಜೂನ್ 30, 2008ರ ಅವಧಿಯಲ್ಲಿ ಚೆನ್ನೈನ ಮಣಪಾಕ್ಕಂನಲ್ಲಿರುವ ಬಾಬೂಜಿ ಮೆಮೋರಿಯಲ್ ಆಶ್ರಮದಲ್ಲಿ ನಡೆಯಲಿದೆ. ಸಹಜ ಮಾರ್ಗದ ಯುವಜನತೆಯನ್ನು, ಆಶ್ರಮಗಳ ನಿರ್ವಹಣೆಯ ವಿವಿಧ ಅಂಶಗಳಲ್ಲಿ ತರಬೇತಿಗೊಳಿಸುವುದು ಈ ಕಾರ್ಯಕ್ರಮದ ಉದ್ದೇಶ.

ಕಾರ್ಯಕ್ರಮದ ಪ್ರಮುಖ ಅಂಶಗಳು:–

★ ಅವರ ವಾಸ್ತವ್ಯದ ಅವಧಿಯಲ್ಲಿ ಸಹಜ ಮಾರ್ಗದ ಬಗ್ಗೆ ಮತ್ತು ಆಶ್ರಮಗಳ ನಿರ್ವಹಣೆಯ ಎಲ್ಲ ಅಂಶಗಳ ಬಗ್ಗೆ ತೀವ್ರ ತರಬೇತಿ
★ ಕಾರ್ಯಕ್ರಮದ ಅವಧಿಯಲ್ಲಿ ಭಾಗವಹಿಸುವ ಅಭ್ಯಾಸಿಗಳಿಗೆ ಯಾವ ಖರ್ಚು ಇಲ್ಲದೆ ಆಶ್ರಮದಲ್ಲಿಯೇ ತಂಗಲು ವ್ಯವಸ್ಥೆ, ಆಹಾರ ಮತ್ತು ಸಾಮೂಹಿಕ ವಸತಿಯನ್ನು ಆಶ್ರಮದಲ್ಲಿ ನೀಡಲಾಗುತ್ತದೆ.

ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹತೆಗಳು:–

★ ಭಾರತದಲ್ಲಿರುವ 20ರಿಂದ 40ವರ್ಷ ವಯಸ್ಸಿನ ಅಭ್ಯಾಸಿಗಳು.
★ ಅರ್ಜಿ ಸಲ್ಲಿಸುವ ವೇಳೆಗೆ ಅಭ್ಯಾಸಿಯು ಸಹಜ ಮಾರ್ಗ ಧ್ಯಾನ ಪದ್ಧತಿಯಲ್ಲಿ ಕನಿಷ್ಠಪಕ್ಷ ಎರಡು ವರ್ಷಗಳಾದರೂ ಸಾಧನೆ ಮಾಡಿರಬೇಕು
★ ಒಂದು ಅಥವಾ ಎರಡು ಭಂಡಾರಗಳಲ್ಲಾದರೂ ಭಾಗವಹಿಸಿರಬೇಕು.
★ ವಲಯ ಸಂಚಾಲಕರು ಅಥವಾ ಕೇಂದ್ರ ಸಂಚಾಲಕರು ಅಥವಾ ಪ್ರಶಿಕ್ಷಕರಿಂದ ಸನ್ನಡತೆಯ ಪ್ರಮಾಣಪತ್ರವನ್ನು ಲಗತ್ತಿಸಬೇಕು.
★ ತರಬೇತಿ ಅವಧಿಯಲ್ಲಿ (ಆಶ್ರಮದಲ್ಲಿ ನೀಡಲಾಗುವ ಉಚಿತ ಆಹಾರ ಮತ್ತು ವಸತಿಯನ್ನು ಹೊರತುಪಡಿಸಿ) ಹಣದ ಅಥವಾ ಇತರೆ ಯಾವುದೇ ರೀತಿಯ ಬೆಂಬಲವನ್ನು ನಿರೀಕ್ಷಿಸಬಾರದು. ತಮ್ಮ ವಾಸ್ತವ್ಯಕ್ಕೆ ಸಾಕಾಗುವಷ್ಟು ಉಡುಪುಗಳು ಮತ್ತು ಸ್ವಂತ ಖರ್ಚಿಗಾಗಿ ಹಣವನ್ನು ತರತಕ್ಕದ್ದು.
★ ಕಾರ್ಯಕ್ರಮದ ಪೂರ್ಣಾವಧಿಯಲ್ಲಿ ಕಾರ್ಯಕ್ರಮದಲ್ಲಿ ಭಾಗಿಯಾಗಲು ಶಿಸ್ತುಬದ್ಧವಾಗಿ ಮತ್ತು ಉತ್ಸಾಹದಿಂದಿರಬೇಕು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಅಭ್ಯಾಸಿಗಳನ್ನು ಮಣಪಾಕ್ಕಂ ಅಥವಾ ಭಾರತದ ಯಾವುದೇ ಆಶ್ರಮಗಳಲ್ಲಿ ಆಶ್ರಮ ಸಿಬ್ಬಂದಿಯಾಗಿ ನೇಮಕ ಮಾಡಲಾಗುವುದು.

ಕಾರ್ಯಕ್ರಮವು ಇಂಗ್ಲೀಷ್‌ನಲ್ಲಿ ನಡೆಯುತ್ತದೆ. ಈ ಕಾರ್ಯಕ್ರಮಕ್ಕೆ ಅರ್ಜಿಹಾಕಲು ಬಯಸುವ ಅಭ್ಯಾಸಿ ಸೋದರ, ಸೋದರಿಯರು ತಮ್ಮ ಅರ್ಜಿಗಳನ್ನು ಆಯಾಯ ವಲಯ/ ಕೇಂದ್ರ/ ಸಂಚಾಲಕ ಪ್ರಶಿಕ್ಷಕರ ಮುಖಾಂತರ ಕಳಿಸತಕ್ಕದ್ದು. ಆಯ್ಕೆಯಾದ ಅಭ್ಯಾಸಿಗಳಿಗೆ ಸೂಕ್ತ ಪರಿಶೀಲನೆಯ ನಂತರ ಇ–ಮೇಲ್/ ಅಂಚೆ/ ಫೋನ್ ಮುಖಾಂತರ ತಿಳಿಸಲಾಗುವುದು. ಅರ್ಜಿಯ ನಮೂನೆಯು ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ದೊರಕುತ್ತದೆ
"http://www.srcm.org/members/ssandesh/2007/2007_12_Youth_Program_ApplicationForm.pdf"

ಭರ್ತಿಮಾಡಿದ ಅರ್ಜಿಗಳನ್ನು ಕೆಳಕಂಡ ವಿಳಾಸಕ್ಕೆ ಕಳಿಸತಕ್ಕದ್ದು.

ಎಸ್.ಪ್ರಕಾಶ್, ಆಶ್ರಮ ನಿರ್ವಹಣಾಧಿಕಾರಿ
ಬಾಬೂಜಿ ಮೆಮೋರಿಯಲ್ ಆಶ್ರಮ, ಶ್ರೀ ರಾಮಚಂದ್ರ ಮಿಷನ್,
ಮಣಪಾಕ್ಕಂ, ಚೆನ್ನೈ - 600 116.
ದೂರವಾಣಿ : + 91 44 4217 1111 / +91 98400 96454
prakash@seechangeworld.com

## ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣ ಕಾರ್ಯಕ್ರಮ

ತಮಿಳುನಾಡಿನ ಅಮರಾವತಿ ನಗರದ ಸೈನಿಕ ಶಾಲೆಯ ಪ್ರಾಂಶುಪಾಲರು ಮತ್ತು ಹಳೆಯ ವಿಧ್ಯಾರ್ಥಿಯೋರ್ವರ ಆಶಯದಂತೆ ಶಾಲೆಯ ಆವರಣದಲ್ಲಿ ಡಿಸೆಂಬರ್ 15 ಮತ್ತು 16,2007ರವರೆಗೆ, ಎರಡು ದಿನಗಳ ಮೌಲ್ಯಾಧಾರಿತ ಆಧ್ಯಾತ್ಮಿಕ ತರಬೇತಿ ಕಾರ್ಯಕ್ರಮವನ್ನು ಯೋಜಿಸಲಾಗಿತ್ತು.



ಕಾರ್ಯಕ್ರಮದಲ್ಲಿ 50 ಜನ ಭಾಗವಹಿಸಿದ್ದರು, ಎಲ್ಲರೂ ಶಾಲೆಯಲ್ಲಿ ಕಾರ್ಯ ನಿರ್ವಹಿಸುವ ಶಿಶುವಿಹಾರ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಕ ವರ್ಗದವರು. ಪ್ರಾಂಶುಪಾಲರಾದ ಕರ್ನಲ್ ಜೆ.ಹೆಚ್. ಸಾಮ್ಯುಯೆಲ್‌ರವರು ಕಾರ್ಯಕ್ರಮದ ಉದ್ಘಾಟನೆ ಮಾಡಿ, ಇದು ಎಲ್ಲ ಶಾಲೆಗಳಲ್ಲೂ ಇಂದಿನ ಅಗತ್ಯವಾಗಿದೆ ಎಂದು ನುಡಿದರು. ಅವರು ನಮ್ಮನ್ನು ಈ ಶಿಕ್ಷಣ ಕ್ರಮದ ಪ್ರಕಾರ ಬೋಧಿಸಲಾಗುವ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಪಾಠ್ಯಕ್ರಮದ ಬಗ್ಗೆ ತಿಳಿಸುವುದಷ್ಟೇ ಅಲ್ಲದೆ ಆಸಕ್ತಿ ಪ್ರೇರಣೆ, ಮುಂದಾಳತ್ವ, ಒತ್ತಡ ನಿರ್ವಹಣೆ ಮತ್ತು ಹರೆಯದವರ ರೂಪಣದ ಬಗೆಗೂ ಗಮನಹರಿಸಬೇಕೆಂದು ವಿನಂತಿಸಿದ್ದರು.




ನಾವು ಶಿಕ್ಷಕರಿಗಾಗಿ ಹಲವು ಪ್ರಾಯೋಗಿಕ ಕಲಾಪಗಳನ್ನು ನಡೆಸಿದೆವು. ಅದನ್ನು ಅವರು ಇಚ್ಛೆ ಪಟ್ಟುದಲ್ಲದೆ ಕ್ರಿಯಾತ್ಮಕವಾಗಿಯೂ, ಉತ್ಸಾಹದಿಂದಲೂ ಭಾಗವಹಿಸಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಲೆ.ಕರ್ನಲ್ ವೀರ್ ಸಿಂಗ್‌ರವರು ಮುಕ್ತಾಯ ಭಾಷಣ ಮಾಡಿದರು. ರಿಜಿಸ್ಟ್ರಾರ್ ರವರಾದ ಸ್ಕ್ವಾ.ಲೀಡರ್ ಸಂಜಯ್ ಪಾಟಿಲ್‌ರವರು ಎರಡೂ ಸಂದರ್ಭಗಳಲ್ಲಿ ಉಪಸ್ಥಿತರಿದ್ದರು. ಭಾಗವಹಿಸಿದ್ದವರಿಗೆ 'ಮನಸ್ಸಿನ ಕ್ರಮಬದ್ಧತೆ' ಮತ್ತು ಸಹಜ ಮಾರ್ಗ ಪದ್ಧತಿಯ ಬಗ್ಗೆಯೂ ತಿಳಿಸಿಕೊಡುವ ಸದವಕಾಶವು ನಮಗೆ ದೊರಕಿತು. ಮುಂದಿನ ವರ್ಷದ ಆರಂಭದಲ್ಲಿ ' ಮುಕ್ತ ಸಭೆ' ನಡೆಸುವ ಆಸಕ್ತಿಯನ್ನು ಪ್ರಾಂಶುಪಾಲರು ಕೋರಿದ್ದಾರೆ.

ಸಂ. ಸೀತಾ ಕುಂಚಿತಪಾದಂ, ಚೆನ್ನೈ

## ಮುಜ್ಞಾಫ್ಫರ್‌ಪುರದಲ್ಲಿ ತರಬೇತಿ ಕಾರ್ಯಕ್ರಮ



8ನೇ ಡಿಸೆಂಬರ್ 2007ರಂದು, ಮುಜ್ಞಾಫ್ಫರ್‌ಪುರ ಕೇಂದ್ರದಲ್ಲಿ ಅಭ್ಯಾಸಿಗಳಿಗಾಗಿ ಒಂದು ಪ್ರಾಥಮಿಕ ತರಬೇತಿ ಕಾರ್ಯಕ್ರಮ ನಡೆಸಲಾಯಿತು. ಬಿಹಾರ ಮತ್ತು ಝಾರಖಂಡ ವಲಯಗಳಿಂದ ಸುಮಾರು 60 ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವು ಸಹಜ ಮಾರ್ಗ ಸಂಶೋಧನಾ ತರಬೇತಿ ಸಂಸ್ಥೆಯ, ಮಾರ್ಗದರ್ಶನ ಸೂಚಿಗನುಸಾರವಾಗಿ ಪರಿಕಲ್ಪಿತವಾಗಿತ್ತು. ಈ ಕಾರ್ಯಕ್ರಮನ್ನು ಸಹೋದರರಾದ ಡಾ.ಜಿ.ಎಮ್. ಭಟ್ನಾಗರ್ ಮತ್ತು ಮನೋಜ್ ತಿವಾರಿ ಅವರುಗಳು ನಿರ್ವಹಿಸಿದರು.

ಸಾಧನೆಯ ವಿವಿಧ ಪ್ರಮುಖ ಅಂಶಗಳ ಮೇಲೆ ಭಾಷಣಗಳಿದ್ದವು ಹಾಗೂ ಅವುಗಳನ್ನು ಚರ್ಚಿಸಲಾಯಿತು. ಭಾಗವಹಿಸಿದ ಅಭ್ಯಾಸಿಗಳು ವಿವಿಧ ಅಂಶಗಳ ಬಗ್ಗೆ ತಮ್ಮ ತಿಳುವಳಿಕೆಯನ್ನು ವ್ಯಕ್ತ ಪಡಿಸಿದರು ಹಾಗೂ ಅವುಗಳಲ್ಲಿ ಪ್ರತಿಯೊಂದರ ಮಹತ್ವವನ್ನೂ ಬಹಳ ಸ್ಪಷ್ಟವಾಗಿ ಕಲಿತರು. ಪ್ರತಿಯೊಂದು ಭಾಗವನ್ನೂ ಪ್ರಸ್ತುತಿ ಮತ್ತು ಕ್ವಿಜ್‌ಗಳಿಂದ ಆಸಕ್ತಿದಾಯಕವಾಗಿರುವಂತೆ ಮಾಡಲಾಗಿತ್ತು. ಅವುಗಳು ಬಹು ಮಾಹಿತಿ ನೀಡುವಂತಹುವುಗಳು ಹಾಗೂ ಸಹಜ ಮಾರ್ಗದ ಬಗ್ಗೆ ಉತ್ತಮವಾದಂತಹ ತಿಳುವಳಿಕೆಯನ್ನು ಒದಗಿಸುವಂತಹವುಗಳು ಆಗಿದ್ದವು.
ಸಂಜೆಯಲ್ಲಿ ಒಂದು ಮುಕ್ತ ಸಭೆಯನ್ನು ಏರ್ಪಡಿಸಲಾಗಿತ್ತು. ಮುಕ್ತ ಸಭೆಯಲ್ಲಿ ಮೂವತ್ತು ಜನ ಅತಿಥಿಗಳು ಭಾಗವಹಿಸಿದ್ದರು. ಸಹಜ ಮಾರ್ಗದ ವಿವಿಧ ಅಂಗಗಳ ಮೇಲೆ ಚರ್ಚೆಗಳು ಮತ್ತು ಒಂದು ಪ್ರಶ್ನೋತ್ತರ ಕಲಾಪಗಳಿದ್ದವು.

ಡಿಸೆಂಬರ್ 9ರಂದು ಒಂದು ಯುವ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಇದನ್ನು ಸಹೋದರ ವಿಜಯ ಕುಮಾರ ಅವರು ಸಂಯೋಜಿಸಿದ್ದರು. ಯುವ ಜನರ ಹಾಗೂ ಯುವಹೃದಯಿಗಳಾಗಿರುವ ಅಭ್ಯಾಸಿಗಳನ್ನು ಸಂಸ್ಥೆಯ ಕಾರ್ಯ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುವುದನ್ನು ಉತ್ತೇಜಿಸುವುದಕ್ಕಾಗಿ ಮತ್ತು ಬಹಳ ವೇಗವಾಗಿ ಬೆಳೆಯುತ್ತಿರುವ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಲು ಶಕ್ತರಾಗಲು ಮತ್ತು ಆದರ್ಶ ಅಭ್ಯಾಸಿಗಳಾಗುವಂತೆ ಮಾಡುವುದೇ ಕಾರ್ಯಕ್ರಮದ ಉದ್ದೇಶವಾಗಿದ್ದಿತು.
ಮೊದಲನೆಯ ಭಾಗವು" ಗುರುಗಳು ಯುವಜನತೆಯಿಂದ ಏನನ್ನು ನಿರೀಕ್ಷಿಸುತ್ತಾರೆ?" ಎಂಬುದಾಗಿತ್ತು. ಅದನ್ನನುಸರಿಸಿ ಯುವಜನರು ಸಾಧನೆಯಲ್ಲಿ ಎದುರಿಸಬೇಕಾದ ಸಮಸ್ಯೆಗಳು ಮತ್ತು ಅವುಗಳ ಪರಿಹಾರಗಳು" ಎಂಬುದಾಗಿತ್ತು. ಎರಡನೆಯ ಭಾಗದಲ್ಲಿ "ಯುವಜನರಿಗೆ ಮಾರ್ಗದರ್ಶನ ಸೂಚಿಗಳು ಹಾಗೂ ಅದರ ಅಳವಡಿಕೆ" ಎಂಬುದನ್ನು ಸಹೋದರ ಅಜಯ ಕುಮಾರ ಅವರು ಮತ್ತು "ಯುವಜನರಿಗಾಗಿ ಸಾಹಿತ್ಯದ ಬಗ್ಗೆ ಸಲಹೆಗಳು" ಎಂಬುದನ್ನು ಸಹೋದರ ಬ್ರಜೇಶ್ ಬರ್ನ್ವಾಲ್‌ರವರು ನಡೆಸಿಕೊಟ್ಟರು.

ದಿನದ ಉಳಿದ ಭಾಗದಲ್ಲಿ ಈ ಕಾರ್ಯಕ್ರಮಗಳಾದ ನಂತರ " ನಮ್ಮ ಕೇಂದ್ರಗಳಲ್ಲಿ ನಾವೇನು ಮಾಡಬೇಕು ಹಾಗೂ ನಮ್ಮ ವೈಯಕ್ತಿಕ ಸಾಧನೆಯಲ್ಲಿ ನಾವೇನು ಮಾಡಬೇಕು?" ಎಂಬ ವಿಷಯದ ಬಗ್ಗೆ ಗುಂಪು ಚರ್ಚೆ ನಡೆಸಲಾಯಿತು. ಚರ್ಚೆಯ ನಂತರ ಪ್ರತಿ ಗುಂಪಿನಿಂದಲೂ ನಡಾವಳಿಗಳ ಒಟ್ಟಾರೆ ತಾತ್ಪರ್ಯವನ್ನು ಮುಂದಿಟ್ಟರು. ದಿನದ ಕೊನೆಯಲ್ಲಿ ಮುಜ್ಞಾಫ್ಫರ್‌ಪುರ ಕೇಂದ್ರದ ಮಕ್ಕಳು ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಿದರು.
ಅಭ್ಯಾಸಿಗಳು ಇಂತಹ ಕಾರ್ಯಕ್ರಮಗಳನ್ನು ಆಗಾಗ್ಗೆ ಹೆಚ್ಚು ಹೆಚ್ಚಾಗಿ ನಡೆಸಬೇಕೆಂದು ಮತ್ತು ಅವು ತಮ್ಮ ಸಾಧನೆಯನ್ನು ಬಲಪಡಿಸುವಲ್ಲಿ ಸಹಾಯವಾಗುವುದೆಂದೂ ಅಭಿಪ್ರಾಯ ಪಟ್ಟರು.

## ಆಂಧ್ರ ಪ್ರದೇಶದಲ್ಲಿ ಮುಕ್ತ ಸಭೆ

ಮನೆಗಳಲ್ಲಿ ಸಭೆ ಸೇರುವುದು ಮತ್ತು ಮುಕ್ತ ಸಭೆಗಳನ್ನು ವಿವಿಧ ಕೇಂದ್ರಗಳಲ್ಲಿ ಮಿಷನ್ನಿನ ಬೆಳವಣಿಗೆಯ ದೃಷ್ಟಿಯಿಂದ ಹಮ್ಮಿಕೊಳ್ಳಲಾಗುತ್ತದೆ.



ಆಗಸ್ಟ್ 23, 2007ರಂದು ಭೋಂಗೀರ್ ಕೇಂದ್ರದಲ್ಲಿ ಮುಕ್ತಸಭೆಯನ್ನು ವ್ಯವಸ್ಥೆಗೊಳಿಸಲಾಯಿತು. ಕೇಂದ್ರವು ಈ ವರ್ಷದ ಆರಂಭದಲ್ಲಿ ಪ್ರಾರಂಭವಾಯಿತು ಮತ್ತು ಆಗಲೇ ನೂರು ಕ್ರಿಯಾಶೀಲ ಅಭ್ಯಾಸಿಗಳಿದ್ದಾರೆ. ಹೈದರಾಬಾದಿನ ಪ್ರಶಿಕ್ಷಕರು ಮತ್ತು ಸ. ಭಿಕ್ಷಂ ರವರು ಮುಕ್ತ ಸಭೆಯನ್ನು ನಡೆಸಿಕೊಟ್ಟರು; 200ರಕ್ಕೂ ಮೀರಿ ಜನರು ಭಾಗವಹಿಸಿದ್ದರು ಹಾಗೂ 20 ಜನರು ಆರಂಭಿಕ ಬೈಠಕ್ ಪಡೆದರು. ಈ ಜಾಗದಲ್ಲಿ ಒಂದು ವರ್ಷದ ಹಿಂದೆ ಅಭ್ಯಾಸಿಗಳೇ ಇರಲಿಲ್ಲವೆಂದು ನಂಬುವುದೇ ಕಷ್ಟವಾಗುತ್ತದೆ.

ನಾಗಾರ್ಜುನಸಾಗರದಲ್ಲಿ, ಕೃಷ್ಣ ವಿಶ್ವವಿದ್ಯಾಲಯದ ಬೋಧಕ ವರ್ಗ ಹಾಗೂ ವಿಧ್ಯಾರ್ಥಿಗಳು, ಬಾಪಟ್ಲದಲ್ಲಿ, ಗೃಹ ವಿಜ್ಞಾನ ಕಾಲೇಜು ಮತ್ತು ತಾಂತ್ರಿಕ ಕಾಲೇಜು, ಮೈಡಕೂರ್, ಬೋಧಕರು ಮತ್ತು ವಿದ್ಯಾರ್ಥಿಗಳು, ತಾಂತ್ರಿಕ ಕಾಲೇಜು, ಕಡಪ, ಪ್ರಾವಿಡೆಂಟ್ ಫಂಡ್ ಕಛೇರಿಗಳು, ಕಡಪ ಮತ್ತು ಪ್ರೊದಟ್ಟೂರ, ಹೈದರಾಬಾದಿನ ಹೆಚ್.ಎ.ಎಲ್. ನ ನೌಕರರು ಮತ್ತು ಬಿ.ಹೆಚ್.ಇ.ಎಲ್. ನ ಪದವಿ ಕಾಲೇಜಿನ ವಿದ್ಯಾರ್ಥಿಗಳು, ಈ ರೀತಿ ಅನೇಕ ಇತರ ಮುಕ್ತ ಸಭೆಗಳನ್ನು ನಡೆಸಲಾಗಿದೆ.

SRCM

# ರಾಷ್ಟ್ರೀಯ ವಾರ್ತಾ ಪತ್ರ

Zonal Roundup

ಜನವರಿ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ1 ಸಂಚಿಕೆ 1

## 'ಅರ್ಹರಾಗಲು ಸೇವೆ'





ಮೈಸೂರು ಕೇಂದ್ರದಲ್ಲಿ ೨೦೦೭ರ ನವೆಂಬರ್ ೩ ಮತ್ತು ೪ರಂದು ಎರಡು ದಿನಗಳ ತರಬೇತಿ ಕಾರ್ಯಕ್ರಮ ನಡೆಯಿತು. ಆಧ್ಯಾತ್ಮಿಕವಾಗಿ ಪ್ರಗತಿ ಸಾಧಿಸಲು ಸೇವೆಯೇ ಅತ್ಯಂತ ಶೀಘ್ರವಾದ ಹಾಗೂ ನಿಶ್ಚಯವಾದ ಮಾರ್ಗ ಮತ್ತು ಸೇವೆಯ ಮೂಲಕ ಆತನ ಕೃಪೆಗೆ ಪಾತ್ರರಾಗಬಹುದು ಎಂಬ ಸಂದೇಶವನ್ನು ಮುಟ್ಟಿಸುವುದು ತರಬೇತಿಯ ಉದ್ದೇಶ. ಅದೇ ರೀತಿ, ತರಬೇತಿ ಕಾರ್ಯಕ್ರಮದ ಉದ್ದೇಶಗಳೆಂದರೆ;

★ ಸೇವೆ ಮಾಡುವ ಅವಶ್ಯಕತೆಯನ್ನು ಅರಿತುಕೊಳ್ಳುವುದು ಮತ್ತು ಸೇವೆಗೆ ಸಂಬಂಧಿಸಿದ ವಿವಿಧ್ಳುವುದು. ವಿಷಯಗಳನ್ನು ತಿಳಿಯುವುದು;
★ ಸೇವೆಯಲ್ಲಿ 'ಕೂಡುಗೆಲಸ' ದ ವಿಷಯವನ್ನು ಅರಿತುಕೊಳ್ಳುವುದು;
★ ಮಿಷನ್ನಿನಲ್ಲಿ ಪ್ರಸ್ತುತವಿರುವ ಸೇವೆಯ ಅವಕಾಶಗಳು ಮತ್ತು ಅವುಗಳಲ್ಲಿ ಭಾಗವಹಿಸುವ ಸಾಧನಗಳನ್ನು ಅರಿತುಕೊಳ

ಮೈಸೂರು, ಹುಣಸೂರು, ಕೆ.ಆರ್. ನಗರ, ನಂಜನಗೂಡು, ಕೊಳ್ಳೇಗಾಲ, ಹಾನೂರು, ಚಾಮರಾಜನಗರ ಮತ್ತು ಟಿ.ನರಸೀಪುರ ಕೇಂದ್ರಗಳಿಂದ ಸುಮಾರು ೧೨೫ ಅಭ್ಯರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಬೆಂಗಳೂರು ಮತ್ತು ಮೈಸೂರಿನ ಸಂಪನ್ಮೂಲ ವ್ಯಕ್ತಿಗಳು ನಡೆಸಿಕೊಟ್ಟರು.

ಮೊದಲ ದಿನ ಸತ್ಸಂಗದೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ಅಭ್ಯಾಸಿಗಳಿಗೆ ಅದರ ಉದ್ದೇಶಗಳ ಪರಿಚಯ ಮಾಡಿಕೊಡಲಾಯಿತು. ಇದಾದ ನಂತರ, ಅಭ್ಯಾಸಿಗಳಿಗೆ ಕೆಲಸದಲ್ಲಿ ವ್ಯವಸ್ಥಿತ ಸಹಕಾರದ ಅವಶ್ಯಕತೆ ಕುರಿತು ಗುಂಪುಗಳಲ್ಲಿ ವಿಚಾರ ಮಾಡಿ ಚರ್ಚಿಸಲು ಹೇಳಲಾಯಿತು.

ಪರಸ್ಪರ ಪ್ರತಿಕ್ರಿಯಿಸುವ ಆಟಗಳ ಮೂಲಕ ಕಲಿಕೆಯನ್ನು ಉಲ್ಲಾಸಮಯವಾಗಿ ಮಾಡುವ ಪ್ರಯತ್ನ ಮಾಡಲಾಯಿತು. ಇದರಿಂದ ಕಾರ್ಯಪ್ರಕ್ರಿಯೆ, ಕೂಡುಗೆಲಸದ ಮಹತ್ವ, ಎದುರಿಸಬೇಕಾದ ಸವಾಲುಗಳು ಮತ್ತು ಅವುಗಳ ಪರಿಹಾರಕ್ಕೆ ಬೇಕಾದ ಸಾಧನಗಳನ್ನು ಅರಿಯಲು ಅಭ್ಯರ್ಥಿಗಳಿಗೆ ಸಾಧ್ಯವಾಯಿತು.

ಎರಡನೆಯ ದಿನ, ಸೇವೆಗೆ ಸಂಬಂಧಿಸಿದ ವಿವಿಧ ವಿಷಯಗಳಾದ ಸೇವೆಯ ಅವಶ್ಯಕತೆ, ಸ್ವಯಂ ಸೇವಕನ ಮನೋಭಾವ, ಕಾರ್ಯನೀತಿಗಳು, ಸ್ವಯಂ ಸೇವಕರಿಗೆ ಬೆಂಬಲ ನೀಡುವುದರಲ್ಲಿ ಮತ್ತು ಅವರನ್ನು ರೂಪಿಸುವಲ್ಲಿ ಕಾರ್ಯನಿರ್ವಾಹಕರ ಮತ್ತು ಪ್ರಶಿಕ್ಷಕರ ಪಾತ್ರ– ಇವುಗಳನ್ನು ಚರ್ಚಿಸಲಾಯಿತು. ತದನಂತರ, ಪ್ರತಿ ಗುಂಪಿನ ಪ್ರತಿನಿಧಿಗಳು ಸಾರಾಂಶವನ್ನು ಮಂಡಿಸಿದರು.

ಅದೇ ದಿನ, ಗುರುಗಳು–ಸಂಸ್ಥೆ–ಪದ್ಧತಿಗೆ ಸಂಬಂಧಿಸಿದಂತೆ ಅಭ್ಯಾಸಿಗಳಿಗೆ ರಸ ಪ್ರಶ್ನೆ ನಡೆಸಲಾಯಿತು. ಇದನ್ನು ಅನುಸರಿಸಿ ಮಿಷನ್ನಿನಲ್ಲಿ ಕೈಗೊಳ್ಳಬಹುದಾದಂತಹ ವಿವಿಧ ಚಟುವಟಿಕೆಗಳಾದ ತರಬೇತಿ ಕಾರ್ಯಕ್ರಮಗಳು, ಮುಕ್ತ ಸಭೆಗಳು, ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣದ ಚಟುವಟಿಕೆಗಳು ಮತ್ತು ಪೂರ್ಣ ದಿನದ ಕಾರ್ಯಕ್ರಮಗಳ ಕಿರು ಪರಿಚಯ ನೀಡಲಾಯಿತು. ಸಂಜೆಯ ಸತ್ಸಂಗದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಸಂ. ಡಾ. ಕೃಷ್ಣಮೂರ್ತಿ, ಬೆಂಗಳೂರು.

## ಚಿಣ್ಣರ ಕೇಂದ್ರ, ಬೆಂಗಳೂರು



"ಮಕ್ಕಳು ಕುಟುಂಬ ಸೌಹಾರ್ದತೆ, ಶಾಂತಿ ಮತ್ತು ಧನ್ಯತೆಯ ಅದ್ಭುತ ಪ್ರತಿನಿಧಿಗಳು. ಮಕ್ಕಳು ನಮ್ಮ ಬದುಕಿನಲ್ಲಿ ಸಂತೋಷದ ಎರಡು ಪ್ರಮುಖ ಅಂಶಗಳಾದ ಬೆಳಕು ಮತ್ತು ನಗೆಯನ್ನು ತರುತ್ತಾರೆ. ಅವರು, ತಾವು ಜನ್ಮ ತಳೆದ ಕುಟುಂಬವಷ್ಟೇ ಅಲ್ಲದೆ, ಇಡೀ ಮಾನವ ಜನಾಂಗದ ಭವಿಷ್ಯವನ್ನು ಪ್ರತಿನಿಧಿಸುತ್ತಾರೆ. ಅವರ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ನೆರವಾಗುವಲ್ಲಿ ನಾವು ಮಾನವ ಜನಾಂಗದ ಭವಿಷ್ಯ ರೂಪಿಸಲು ಒಂದು ನಿಶ್ಚಿತ ರೂಪದಲ್ಲಿ ಭಾಗಿಗಳಾಗುತ್ತೇವೆ". ಶ್ರೀ ಪಿ. ಉಾಜಗೋಪಾಲಾಚಾರಿ

ಬೆಂಗಳೂರಿನ ಚಿಣ್ಣರ ಕೇಂದ್ರವು, ತಂದೆ ತಾಯಿಯರು ಭಾನುವಾರದ ಸತ್ಸಂಗದಲ್ಲಿರುವಾಗ ಅವರಿಗೆ ತಮ್ಮ ಮಕ್ಕಳು ಸಂರಕ್ಷಣೆಯಲ್ಲಿರುವರೆಂಬ ಭರವಸೆ ನೀಡಲು ಮತ್ತು ಮಕ್ಕಳಿಗೆ ಒಂದು ಸೌಹಾರ್ದಯುತ ವಾತಾವರಣ ಕಲ್ಪಿಸುವ ಉದ್ದೇಶದಿಂದ ಕಾರ್ಯನಿರತವಾಗಿದೆ.

ಇದರ ಸಲುವಾಗಿ, ಭಾನುವಾರಗಳಂದು, ಸ್ವಯಂ ಸೇವಕರು ಮತ್ತು ಒಬ್ಬ ಮೇಲ್ವಿಚಾರಕರಿರುವ ಪದ್ಧತಿಯೊಂದನ್ನು ಕಲ್ಪಿಸಿ ಕಾರ್ಯಗತಗೊಳಿಸಲಾಯಿತು. ಮೇಲ್ವಿಚಾರಕರು ತಮ್ಮ ಅನುಭವ ಮತ್ತು ಕುಶಲತೆಗೆ ಅನುಗುಣವಾಗಿ ಚಟುವಟಿಗೆಗಳನ್ನು ನಿರ್ಧರಿಸಿ, ಯೋಜಿಸಿ, ತಯಾರಿಸಲು ಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಸ್ವಯಂ ಸೇವಕರು ಮಕ್ಕಳಿಗೆ ಒಬ್ಬ ಅನುಕರಣೀಯ ವ್ಯಕ್ತಿಯಾಗುವ ಮಹತ್ವಕ್ಕೆ ಒತ್ತು ಕೊಡಲಾಗಿದೆ.

ಈ ಯೋಜನೆ ಚೆನ್ನಾಗಿ ಕಾರ್ಯರೂಪಕ್ಕೆ ಬಂದಿದ್ದು, ಸಕಾರಾತ್ಮಕ ಅಂಶವೆಂದರೆ ಮಕ್ಕಳಿಗೆ ಪ್ರತೀವಾರ ಕಥೆ ಹೇಳುವುದು, ಬೊಂಬೆಗಳ ತಯಾರಿಕೆ, ಬೊಂಬೆ ಪ್ರದರ್ಶನ, ಕುಶಲ ಕಲೆ, ರಸ ಪ್ರಶ್ನೆ, ನಟನೆ, ಹಾಡುಗಾರಿಕೆ, ಚಿತ್ರಕಲೆ ಮುಂತಾದ ವಿವಿಧ ಚಟುವಟಿಕೆಗಳು ಲಭ್ಯವಾಗಿವೆ . ಮೇಲ್ವಿಚಾರಕರು ಹೊಸ ಹೊಸ ಯೋಜನೆಗಳನ್ನು ರೂಪಿಸಿದ್ದು, ೮–೧೦ ವಾರಗಳವರೆಗೆ ಅವರ ಉಸ್ತುವಾರಿ ನಡೆಯುತ್ತದೆ. ಅವರ ಪೂರ್ವ ಯೋಜನೆಯಿಂದಾಗಿ ಕಾರ್ಯಕ್ರಮದ ಪುನರ್ರಚನೆಯಲ್ಲಿ ಹೊಂದಾಣಿಕೆ ಮೂಡಿದೆ. ಹೀಗಾಗಿ ಸ್ವಯಂ ಸೇವಕರೂ ಸಹ ನಿಯಮಿತವಾಗಿ ಸತ್ಸಂಗಗಳಲ್ಲಿ ಭಾಗವಹಿಸುತ್ತಿದ್ದಾರೆ. ಇದು ಸ್ವಯಂ ಸೇವಕರು ತಮ್ಮ ಕಾರ್ಯದಲ್ಲಿ ಅನುರಕ್ತಿ ಬೆಳೆಸಿಕೊಳ್ಳುವ ಅಪಾಯವನ್ನು ತಗ್ಗಿಸಿದೆ. ಪ್ರಾರಂಭದಲ್ಲಿ ಸಮಸ್ಯೆಗಳನ್ನು ಎದುರಿಸಿ, ಪರಿಹರಿಸಿಕೊಂಡವರು ಈಗ ಅಧಿಕ ವಿಶ್ವಾಸದಿಂದ ಕೂಡಿದ್ದಾರೆ ಮತ್ತು ಮೇಲಿನ ಹಂತದ ಚಟುವಟಿಕೆಗಳನ್ನು ನಡೆಸಲು ಸಿದ್ಧರಾಗಿದ್ದಾರೆ.

ಸೌಹಾರ್ದಯುತ ವಾತಾವರಣ ಮತ್ತು ಸ್ವಯಂ ಸೇವಕರ ಪ್ರಯತ್ನಗಳಿಂದಾಗಿ ತಂದೆ ತಾಯಿಗಳು ಸ್ವಯಂ ಸೇವಕರಿಗೆ ಅಧಿಕವಾಗಿ ನೆರವು ನೀಡುತ್ತಿದ್ದಾರೆ ಮತ್ತು ಕೆಲ ತಂದೆ ತಾಯಿಯರು ಸ್ವಯಂ ಸೇವಕರಾಗಲು ಮುಂದೆ ಬರುತ್ತಿದ್ದಾರೆ. ಅನೇಕ ಪ್ರಾರಂಭಿಕ ಸಮಸ್ಯೆಗಳಿದ್ದರೂ, ಸ್ವಯಂ ಸೇವಕರ ಮತ್ತು ಆಶ್ರಮದ ಕಛೇರಿಯವರ ಸಹನೆಯಿಂದಾಗಿ, ಅವುಗಳಿಗೆ ತಕ್ಷಣವೆ ಪರಿಹಾರ ದೊರಕಿದೆ ಮತ್ತು ಭವಿಷ್ಯದಲ್ಲಿ ಅವುಗಳ ಪುನರಾವರ್ತನೆಯನ್ನು ನಿವಾರಿಸಲು ಬದಲಾವಣೆಗಳನ್ನು ತರಲಾಗಿದೆ.

ಸಂ. ಪ್ರಭಾಕರ ರಾವೂರಿ, ಬೆಂಗಳೂರು

## ಅಭ್ಯಾಸಿಗಳ ತರಬೇತಿ ಕಾರ್ಯಕ್ರಮ – ಇಂದೂರು ಕೇಂದ್ರ



ಇಂದೂರು ಆಶ್ರಮದಲ್ಲಿ 28ರಿಂದ 30 ಡಿಸೆಂಬರ್ 2007ರವರೆಗೆ ಅಭ್ಯಾಸಿಗಳ ನಿವಾಸಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ತರಬೇತಿ ಅವಧಿಯಲ್ಲಿ ಮಧ್ಯಪ್ರದೇಶದ ವಿವಿಧ ಕೇಂದ್ರಗಳಿಂದ 90 ಅಭ್ಯಾಸಿಗಳು ಭಾಗವಹಿಸಿ ಆಶ್ರಮದಲ್ಲೇ ಉಳಿದಿದ್ದರು. ಕಾರ್ಯಕ್ರಮ ಒಳಗೊಂಡ ವಿವಿಧ ಚಟುವಟಿಕೆಗಳೆಂದರೆ ದೈನಂದಿನ ಸಾಧನೆ, ಸಹಜ ಮಾರ್ಗ ಸಾಧನೆಯ ವಿವಿಧ ವಿಷಯಗಳನ್ನು ಕುರಿತು ಔಪಚಾರಿಕ ಉಪನ್ಯಾಸಗಳು, ಗುಂಪು ಚರ್ಚೆಗಳು, ಪ್ರಶ್ನೋತ್ತರ ಮತ್ತು ಮಿಷನ್ನಿನ ಸಾಹಿತ್ಯ ಪಠಣ.

ತರಬೇತಿಯಲ್ಲಿ, ಸಾಧನೆಯನ್ನು ಗುರುಗಳಿತ್ತಿರುವ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಪ್ರಾಯೋಗಿಕವಾಗಿ ಅನುಸರಿಸುವುದರ ಬಗ್ಗೆ ಒತ್ತು ನೀಡಲಾಯಿತು.



ಸಾಧನೆಯಲ್ಲಿ ಕ್ರಮಬದ್ಧತೆ ಮತ್ತು ಪ್ರಾಮಾಣಿಕತೆಯನ್ನು ತರುವಲ್ಲಿ ಪುನಶ್ಚೇತನಗೊಂಡ ಆಸಕ್ತಿ ಮತ್ತು ಉತ್ಸಾಹ ಮೂಡಿರುವುದು ಎದ್ದು ಕಾಣುತ್ತಿತ್ತು. ಕೊನೆಯ ದಿನ ಕೆಲ ಅಭ್ಯಾಸಿಗಳು ಕಾರ್ಯಕ್ರಮವನ್ನು ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಎಲ್ಲರಿಗೂ ಗುರುಗಳ ಸಾನ್ನಿಧ್ಯ ಮತ್ತು ಅವರ ಕೃಪೆಯ ಅನುಭವ ಉಂಟಾಯಿತು.

ಸೋದರ ಅವಿನಾಶ ಕರಮರಕರ್ ಮತ್ತು ಸೋದರ ರಾಜೇಶ್ ರಾವೆರ್‌ಕರ್, ಇಂದೂರ್

## ಗುಜರಾತಿನ ತರಬೇತಿ ಕಾರ್ಯಕ್ರಮ



ಎರಡು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಪದ್ಧತಿಯನ್ನು ಅನುಸರಿಸುತ್ತಿರುವ ಅಭ್ಯಾಸಿಗಳಿಗೆ ಪ್ರತಿ ತಿಂಗಳ ಎರಡನೆಯ ವಾರದ ಕೊನೆಯಲ್ಲಿ ಹಿಂದಿ ಮತ್ತು ಗುಜರಾತಿ ಭಾಷೆಗಳಲ್ಲಿ ಪರ್ಯಾಯವಾಗಿ ತರಬೇತಿ ಕಾರ್ಯಕ್ರಮವನ್ನು ನಿಗದಿಗೊಳಿಸಲಾಗಿದೆ. ಇಡೀ ಗುಜರಾತ್ ವಲಯದಲ್ಲಿ ಇದು ಅಹಮದಾಬಾದಿನ ಅದಾಲಜ್ ಆಶ್ರಮದಲ್ಲಿ ಕೇಂದ್ರೀಕರಣ ಗೊಂಡಿದೆ.

ಗುರುಗಳು ತಿಳಿಸಿರುವಂತೆ ಪ್ರತಿಭೆಗಳನ್ನು ಗುರುತಿಸಿ, ಅರಳಿಸಿ, ಮಿಷನ್ನಿನ ಸತ್ವಭರಿತ ಆಸ್ತಿಯನ್ನಾಗಿ ಬೆಳೆಸುವುದು ಇದರ ಒಂದು ಪ್ರಮುಖ ಧ್ಯೇಯ.

ಇತ್ತೀಚಿಗೆ ಗುಜರಾತಿಯಲ್ಲಿ ನಡೆದ ತರಬೇತಿಯು ಶನಿವಾರ ಬೆಳಿಗ್ಗೆ 8ಗಂಟೆಗೆ ಆರಂಭವಾಗಿ ಭಾನುವಾರ ಮಧ್ಯಾಹ್ನ 4ಕ್ಕೆ ಮುಕ್ತಾಯವಾಯಿತು. ಭಾಗವಹಿಸಿದವರ ಸಂಖ್ಯೆ 40. ಯೋಜಿತ ಚಟುವಟಿಕೆಗಳು ವಿವಿಧ ರೀತಿಯಲ್ಲಿ ಪರಸ್ಪರ ಪ್ರತಿಕ್ರಿಯಾತ್ಮಕವಾಗಿದ್ದು, ಅಭ್ಯಾಸಿಗಳು ಹೃದಯವನ್ನು ತೆರೆದು ತಮ್ಮ ಅಭಿಪ್ರಾಯಗಳನ್ನು ಎಲ್ಲರೊಡನೆ ಹಂಚಿಕೊಳ್ಳಲು ನೆರವಾಯಿತು. "ಕೇಂದ್ರದ ಬೆಳವಣಿಗೆಯಲ್ಲಿ ನಾನು ಹೇಗೆ ಭಾಗವಹಿಸಬಲ್ಲೆ" ಮುಂತಾದ ವಿಷಯಗಳನ್ನು ಸ್ಪಂದನಶೀಲವಾಗಿ ಚರ್ಚೆಗೊಂಡು ಪ್ರೇರಣಾತ್ಮಕ ಅಭಿಪ್ರಾಯಗಳನ್ನು ಮಾಡಿಸಲಾಯಿತು. ಗುಂಪುಗಳು ವಿವಿಧ ಆಧ್ಯಾತ್ಮಿಕ ಮೌಲ್ಯಗಳ ಕುರಿತು ಪ್ರಹಸನಗಳನ್ನೂ ನಡೆಸಿದವು. ಒಂದು ಅಧಿವೇಶನದಲ್ಲಿ ಗುಂಪಿನ ಸದಸ್ಯರು "ಗುರುಗಳನ್ನು ಮೊದಲಬಾರಿಗೆ ಕಂಡಾಗ ತಾವು ಹೇಗೆ ಬದಲಾದರು" ಎಂಬ ವಿಷಯವನ್ನು ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಗುರುಗಳು ತಮ್ಮೊಡನೆ ಇರುವರೆಂಬ ಅನುಭವ ಎಲ್ಲರಿಗೂ ಬಂದಿತು.

"ಸಹಜ ಮಾರ್ಗವನ್ನು ಹೊಸಬರಿಗೆ ಪರಿಚಯಿಸುವುದು ಹೇಗೆ?" ಮತ್ತು "ಸಾಧನೆಯಲ್ಲಿ ಕ್ರಮಬದ್ಧತೆಯ ಮಹತ್ವ"– ಇವು ಉಪನ್ಯಾಸಕರು ಮಾತನಾಡಿದ ಅನೇಕ ಪ್ರಮುಖ ವಿಷಯಗಳಲ್ಲಿ ಕೆಲವು. ನಿಜ ಜೀವನದ ಘಟನೆಗಳನ್ನು ತಿಳಿಸಿದುದರಿಂದ, ಅಭ್ಯಾಸಿಗಳಿಗೆ ಗುರು, ಮಿಷನ್ ಮತ್ತು ಪದ್ಧತಿಗಳನ್ನು ಚೆನ್ನಾಗಿ ಅರಿತುಕೊಳ್ಳಲು ನೆರವಾಯಿತು.

ಮಾತನಾಡಿದ ಉಪನ್ಯಾಸಕರೆಂದರೆ – ಸಹೋದರ ಸುರೇಶ್ ರಾಜಗೋಪಾಲನ್, ತಾರಾ ಚೌಹಾನ್, ಜಿಗ್ನೇಶ್ ಶೀಲಾತ್, ಡಾ.ವಿನೋದ್ ಅಗರ್ವಾಲ್, ಡಾ,ಸುರೇಂದ್ರ ಅಗರ್ವಾಲ್, ಹಿರೇನ್ ಶಾ, ಭಾವಿನ್ ಪಟೇಲ್, ಹರ್ಷ ಚೌಹಾನ್, ರಾಜೇಂದ್ರ ರಾಥೋಡ್, ವಿಭಾ ರಾಥೋಡ್, ವಿಲಾಸ್ ಭೋಂಡೆ ಮತ್ತು ಸಮಿತ್ ಪಟೇಲ್.

ಒಂದು ಅಧಿವೇಶನದಲ್ಲಿ ಒಂದು ವಸ್ತು/ವಿಷಯವನ್ನು ಕೊಟ್ಟು, ಅದರಲ್ಲಿ ಅಡಗಿರುವ ಆಧ್ಯಾತ್ಮಿಕ ಮೌಲಗಳನ್ನು ಗುರುತಿಸಿ ಮಾತನಾಡಲು ಹೇಳಲಾಗಿದ್ದು, ಅದು ಆಧ್ಯಾತ್ಮಿಕವಾಗಿ ಬೆಳಕು ಚೆಲ್ಲುವ ಕಾರ್ಯಕ್ರಮವಾಗಿತ್ತು. ಶನಿವಾರ ಸಂಜೆ ಏರ್ಪಡಿಸಿದ್ದ ಶಿಬಿರಾಗ್ನಿಯು ಭ್ರಾತೃತ್ವ ಮತ್ತು ಮೈತ್ರಿಗಳ ದ್ಯೋತಕವಾಗಿತ್ತು. ಅಭ್ಯಾಸಿಗಳು ತಮ್ಮ ಹಾಡುಗಾರಿಕೆ ಮತ್ತು ಏಕಪಾತ್ರಾಭಿನಯ ಪ್ರತಿಭೆಗಳನ್ನು ಪ್ರದರ್ಶಿಸಿದರು.

ನಾಲ್ಕು ಸತ್ಸಂಗಗಳು ತಮ್ಮದೇ ಆದ ರೀತಿಯಲ್ಲಿ ವಿಶಿಷ್ಟವಾಗಿದ್ದವು. ಸತ್ಸಂಗಗಳಿಂದ ನಿರ್ಮಿತವಾದ ವಾತಾವರಣವು ನಿಶ್ಚಿತವಾಗಿಯೂ ಅಭ್ಯಾಸಿಗಳಲ್ಲಿ ಆಂತರಿಕ ಹಂಬಲ ಅರಳಲು ಅನುವು ಮಾಡಿಕೊಡುತ್ತದೆ. ಇಂತಹ ಕಾರ್ಯಕ್ರಮಗಳ ಫಲವಾಗಿ ನಿಷ್ಠಾವಂತ ಅಭ್ಯಾಸಿಗಳ ತಂಡಗಳು ನಿರ್ಮಾಣಗೊಂಡು, ಅವು ವಡೋದರಾದಲ್ಲಿ 24.07.2009ರಂದು ನಡೆಯುವ ಉತ್ಸವದಲ್ಲಿ ಹೊಣೆವಹಿಸಿಕೊಂಡು ಮಹತ್ವಪೂರ್ಣ ಪಾತ್ರವನ್ನು ಪ್ರದರ್ಶಿಸುವುವೆಂಬ ವಿಶ್ವಾಸ ಮತ್ತು ಆಶಾಕಿರಣ ನಮಗಿದೆ.

© 2008 Shri Ram Chandra Mission ("SRCM"). All rights reserved.
"Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.
This message may be edited for content and is intended exclusively for the members of SRCM.
The views expressed herein are not necessarily those of SRCM.
Privacy Statement: http://www.srcm.org/members/privacypolicy.jsp